## ನಾರಾಯಣರಾದ ವೈದ್ಯರು

ಉತ್ತರಕಾಶಿ ಸುರಂಗದಲ್ಲಿ ಸಿಕ್ಕಿಹಾಕಿಕೊಂಡವರ ಮಾನಸಿಕ ಆರೋಗ್ಯದಲ್ಲಿ ತಾತ್ಕಾಲಿಕ ಏರುಪೇರುಗಳಾಗಬಹುದು ಎಂಬುದನ್ನು ಮೊದಲೇ ಗ್ರಹಿಸಿದ್ದ ರಕ್ಷಣಾ ಜಾಗದಲ್ಲಿ ಕ್ಯಾಂಪ್ ಮಾಡಿದ್ದ ವೈದ್ಯರ ತಂಡ, ಸಂತ್ರಸ್ತರೊಂದಿಗೆ ಸಂಪರ್ಕ ಏರ್ಪಟ್ಟ ದಿನದಿಂದಲೂ ಅವರಿಗೆ ಧೈರ್ಯ ಹೇಳುತ್ತಲೇ ಇತ್ತು. ರಕ್ಷಣಾ ಕಾರ್ಯ ವಿಳಂಬವಾಗುತ್ತಿದ್ದಷ್ಟು ಹೊತ್ತು ಒಳಗಿದ್ದವರ ಹಾಗೂ ಹೊರಗಿದ್ದ ಅವರ ಸಂಬಂಧಿಕರಲ್ಲಿ ಹತಾಶೆ, ದುಃಖ ಪ್ರಕಟಗೊಳ್ಳುತ್ತಿದ್ದವು.

ಬಿಎಸ್‌ಎನ್‌ಎಲ್ ತಾತ್ಕಾಲಿಕವಾಗಿ ನಿರ್ಮಿಸಿದ್ದ ಸಂವಹನ ವ್ಯವಸ್ಥೆಯನ್ನು ಬಳಸಿ ಅಧಿಕಾರಿಗಳೊಂದಿಗೆ, ಸಂಬಂಧಿಕರೊಂದಿಗೆ ಮಾತನಾಡುತ್ತಿದ್ದ ಒಳಗಿದ್ದ ಕಾರ್ಮಿಕರು ಕೇಳುತ್ತಿದ್ದುದು ಒಂದೇ ಪ್ರಶ್ನೆ – 'ನಾವು ಇನ್ನೆಷ್ಟು ಕಾಲ ಇಲ್ಲಿರುವುದು, ನಮ್ಮನ್ನು ಯಾವಾಗ ಹೊರಗೆ ತೆಗೆಯುತ್ತೀರಿ?'

ಬಿಹಾರದ ಸುನಿತಾ ಎಂಬ ಮಹಿಳೆಯ ಮೈದುನ ವೀರೇಂದ್ರ, 'ಅಲ್ಲೇನು ನಡೆಯುತ್ತಿದೆ? ಅಧಿಕಾರಿಗಳು ಏನು ಹೇಳುತ್ತಿದ್ದಾರೆ? ಇಲ್ಲಿಂದ ಹೊರ ಬರುವವರೆಗೂ ನಾನು ತಿಂಡಿ ಊಟ ಮಾಡುವುದಿಲ್ಲ' ಎಂದು ಹಟ ಹಿಡಿದು ಅಂದಿನ ತಿಂಡಿಯನ್ನು ತಿಂದಿರಲಿಲ್ಲ. ಅವನನ್ನು ವೈದ್ಯವೃಂದ ಸಮಾಧಾನಪಡಿಸಿತ್ತು.

'ಸುರಂಗದೊಳಗೆ ಸಿಕ್ಕಿ ಹಾಕಿಕೊಂಡಿದ್ದ ತಮ್ಮ ತಂದೆ, ಮಗ, ಗಂಡ, ಸಹೋದರರು ಸಂಪರ್ಕಕ್ಕೆ ಬಂದೊಡನೆ ಎರಡೂ ಕಡೆಯವರ ಉದ್ವೇಗ, ಆತಂಕ, ದುಃಖದ ಕಟ್ಟೆ ಒಡೆಯುತ್ತಿತ್ತು. ನಾವಷ್ಟೇ ಅಲ್ಲ, ಎಸ್‌ಡಿ.ಆರ್‌ಎಫ್, ಎನ್‌ಡಿ.ಆರ್‌ಎಫ್ ಅಧಿಕಾರಿಗಳು ಸಹ ಒಳಗಿನವರಿಗೆ ಧೈರ್ಯ ಮತ್ತು ಹೊರಗಿನ ಸಂಬಂಧಿಕರಿಗೆ ಸಾಂತ್ವನ ಹೇಳುತ್ತಿದ್ದರು. ಮುಂದೇನಾಗಬಹುದು ಎಂಬ ಬಗ್ಗೆ ಸ್ಪಷ್ಟತೆ ಇಲ್ಲದಿದ್ದಾಗ ಸಂಬಂಧಿಕರಿಗೆ ಅಥವಾ ಒಳಗಿನವರಿಗೆ ಸುಳ್ಳು ಆಶ್ವಾಸನೆ ಕೊಡುವುದು ನಮ್ಮಿಂದ ಆಗುತ್ತಿರಲಿಲ್ಲ, ಆದರೆ ನಾವು ಹೇಳಿದ್ದ ಯೋಗ, ಧ್ಯಾನ ಮತ್ತು ನಡಿಗೆಯನ್ನು ಅನುಸರಿಸಿದ ಎಲ್ಲರೂ ತಮ್ಮ ತಮ್ಮಲ್ಲಿ ಜಗಳ–ವಿವಾದ ಮಾಡಿಕೊಳ್ಳದೆ ತಕ್ಕಮಟ್ಟಿಗೆ ಸಂಯಮ ಕಾಪಾಡಿಕೊಂಡಿದ್ದರು. ಅದು ನಮ್ಮ ಕೆಲಸವನ್ನು ಸುಲಭವಾಗಿಸಿತು. ಆದರೆ ಸಂಬಂಧಿಕರನ್ನು ಸಮಾಧಾನ ಪಡಿಸುವುದೇ ಸವಾಲಾಗಿತ್ತು' ಎಂಬುದು ಕಾರ್ಯಾಚರಣೆಯ ಭಾಗವಾಗಿದ್ದ ವೈದ್ಯರ ಮತ್ತು ಸಿಬ್ಬಂದಿಯ ಅಭಿಪ್ರಾಯ.

ಹೊರತೆಗೆದ ನೀರು ಗಣಿಯ ಭಾಗಗಳಲ್ಲಿನ ಕೊರಕಲುಗಳಲ್ಲಿ ಸೇರಿಕೊಂಡು ಮತ್ತೆ ಮತ್ತೆ ಗಣಿಯಾಳಕ್ಕೆ ಸುರಿಯುತ್ತಿತ್ತು. ಈ ಪ್ರಯತ್ನ ಫಲಕಾರಿಯಾಗಲಿಲ್ಲ.

ಗಣಿಯ ಕೆಳಭಾಗದಲ್ಲಿ ಆಮ್ಲಜನಕದ ಪ್ರಮಾಣ ಕುಸಿಯುತ್ತಿತ್ತು. ಆಗ ನೆರವಿಗೆ ಬಂದದ್ದು 'ಕೋಲ್ ಇಂಡಿಯಾ ಲಿಮಿಟೆಡ್'ನಲ್ಲಿ ಸುರಕ್ಷತೆ ಮತ್ತು ರಕ್ಷಣಾ ವಿಭಾಗದ ಚೀಫ್ ಜನರಲ್ ಮ್ಯಾನೇಜರ್ ಆಗಿದ್ದ ಎಂಜಿನಿಯರ್ ಜಸ್ವಂತ್ ಸಿಂಗ್ ಗಿಲ್ ಅವರ ವಿನೂತನ ತಂತ್ರಗಾರಿಕೆ. 7 ಅಡಿ ಎತ್ತರ ಮತ್ತು 22 ಇಂಚು ವ್ಯಾಸದ ಸ್ಟೀಲ್ ಕ್ಯಾಪ್ಸೂಲ್ (ಲೋಹ ಕೋಶ) ತಯಾರಿಸಿ, ಅದನ್ನು ಕುಸಿದಿರುವ ಪ್ರದೇಶದ ಆಳಕ್ಕೆ ಕಳುಹಿಸಿ ಸಿಲುಕಿಕೊಂಡಿರುವ ಕಾರ್ಮಿಕರನ್ನು ಒಬ್ಬೊಬ್ಬರಾಗಿ ಹೊರ ತೆಗೆಯಬೇಕು ಎಂಬುದು ಗಿಲ್‌ರ ಸಲಹೆಯಾಗಿತ್ತು. ಅದುವರೆಗೂ ಅಂಥ ಪ್ರಯೋಗವನ್ನಾಗಲೀ ಪ್ರಯತ್ನವನ್ನಾಗಲೀ ಭಾರತದ ಮಟ್ಟಿಗೆ ಯಾರೂ ಮಾಡಿರಲಿಲ್ಲ. ಗಿಲ್ ಹೇಳಿದ ತಂತ್ರಗಾರಿಕೆ ತಾತ್ವಿಕವಾಗಿ ಸರಿ ಎನಿಸುತ್ತಿತ್ತು. ಆದರೆ ಪ್ರಯೋಗಿಸಿ ಸಫಲವಾಗಬಹುದೇ ಎಂಬುದು ಯಾರಿಗೂ ಗೊತ್ತಿರಲಿಲ್ಲ.

ಕೊಳವೆ ಬಾವಿಗೆ ನೆಲ ಕೊರೆಯುವಂತೆ ಗಣಿಭಾಗವನ್ನು ಕೊರೆದು, ನಂತರ ಲೋಹ ಕೋಶವನ್ನು ಕೆಳಗಿಳಿಸಬೇಕಿತ್ತು. ಮೂರು ದಿನಗಳಲ್ಲಿ ಕೋಶವನ್ನು ನಿರ್ಮಿಸಲಾಯಿತು. ನಂತರ ಯಾವುದೇ ಯಂತ್ರ ಬಳಸದೆ ಹಗ್ಗ ಕಟ್ಟಿ ಹೊಸದಾಗಿ ಕೊರೆದ ಕೊಳವೆಯಲ್ಲಿ ಕ್ಯಾಪ್ಸೂಲ್ ಅನ್ನು ನಾಲ್ಕಾರು ಬಾರಿ ಇಳಿಸಿ ಏರಿಸಿ ನೋಡಲಾಯಿತು. ಹದಿನೈದು ನಿಮಿಷಗಳ ನಂತರ ಅದು ಗಣಿಯಲ್ಲಿ ಸಿಲುಕಿರುವವರ ಬಳಿ ತಲುಪುತ್ತದೆ ಎಂದು ಖಚಿತವಾದಾಗ, ಸಿಲುಕಿಕೊಂಡಿರುವವರನ್ನು ಹೊರತರುವ ಮೊದಲ ಪ್ರಯತ್ನ ಶುರುವಾಯಿತು. ಇದು ತುಂಬಾ ಸಮಯ ತೆಗೆದುಕೊಳ್ಳುತ್ತದೆ ಎಂದು ತಿಳಿದಾಗ ಕ್ರೇನ್ ಬಳಸಿ ಕ್ಯಾಪ್ಸೂಲ್ ಅನ್ನು ಕೇವಲ ಮೂರೇ ನಿಮಿಷಗಳಲ್ಲಿ ಕೆಳಗಿಳಿಸಲಾಯಿತು.

ಒಬ್ಬೊಬ್ಬರಾಗಿ ಕೋಶ ಪ್ರವೇಶಿಸುವುದು ಕಾರ್ಮಿಕರಿಗೆ ಗೊತ್ತಾಗದಿದ್ದರೆ ಅನನುಕೂಲವಾಗಬಹುದು, ನಾನೇ ಉಸ್ತುವಾರಿ ವಹಿಸಿ ಒಬ್ಬೊಬ್ಬರನ್ನೇ ಮೇಲಕ್ಕೆ ಕಳಿಸುತ್ತೇನೆ ಎಂದ ಗಿಲ್, ಸ್ವತಃ ತಾವೇ ಕೋಶದೊಳಗೆ ಸೇರಿಕೊಂಡು ಕಾರ್ಮಿಕರು ಸಿಲುಕಿಕೊಂಡಿದ್ದ ಜಾಗಕ್ಕೆ ಬಂದಿಳಿದರು. ಇದನ್ನು ಕಂಡ ಕಾರ್ಮಿಕರು ತಾವಿನ್ನು ಬದುಕಿ ಹಿಂತಿರುಗುತ್ತೇವೆ ಎಂದು ಸಮಾಧಾನಗೊಂಡು, ಗಿಲ್ ಹೇಳಿದ ಕ್ರಮವನ್ನನುಸರಿಸಿ ಒಬ್ಬೊಬ್ಬರೇ ಕೋಶದಲ್ಲಿ ಸೇರಿಕೊಂಡು ಮೇಲೆ ಬಂದರು. ಇಡೀ ಕಾರ್ಯಾಚರಣೆಗೆ ಆರು ಗಂಟೆಗಳು ಹಿಡಿದವು. 65 ಜನ ಬದುಕಿ ಹೊರಬಂದ ಕಾರ್ಯಾಚರಣೆಯನ್ನು 20 ಸಾವಿರ ಜನ ವೀಕ್ಷಿಸಿದ್ದರು.

ಗಿಲ್‌ರ ಸಾಹಸ ಮೆಚ್ಚಿ ಭಾರತ ಸರ್ಕಾರ 1991ರಲ್ಲಿ 'ಸರ್ವೋತ್ತಮ ಜೀವ ರಕ್ಷಾ ಪದಕ' ನೀಡಿ ಗೌರವಿಸಿದೆ. 2019 ರ ನವೆಂಬರ್‌ನಲ್ಲಿ ಗಿಲ್‌ರ ಭೌತಿಕ ಶರೀರ ಕಣ್ಮರೆಯಾಯಿತಾದರೂ, ಅವರು ಮಾಡಿದ ಕೆಲಸ ಭಾರತದ ಜನಮಾನಸದಲ್ಲಿ ಶಾಶ್ವತವಾಗಿ ಉಳಿದಿದೆ. ಆ ಘಟನೆಯನ್ನಾಧರಿಸಿ ನಟ ಅಕ್ಷಯ್‌ಕುಮಾರ್ ನಟಿಸಿದ 'ಮಿಷನ್ ರಾಣಿಗಂಜ್, ದಿ ಗ್ರೇಟ್ ಭಾರತ್ ರೆಸ್ಕ್ಯೂ' ಸಿನಿಮಾ ಇತ್ತೀಚೆಗೆ ತೆರೆಕಂಡಿತ್ತು. ನಿಜ ಜೀವನದಲ್ಲಿ ರಕ್ಷಣಾ ಕಾರ್ಯವನ್ನು ತಾವೇ ಮುಂದೆ ನಿಂತು ನಡೆಸಿದ ಜಸ್ವಂತ್ ಸಿಂಗ್ ಗಿಲ್ ಅವರನ್ನು ಜನ 'ಕ್ಯಾಪ್ಸೂಲ್ ಗಿಲ್' ಎಂದೇ ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ.

## ಮರಳಿ ಬಂದ 'ಬೋರ್‌ವೆಲ್ ಪ್ರಿನ್ಸ್'

ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಹಲ್ದೇರಿ ಹಳ್ಳಿಯು ಜುಲೈ 2006ರಲ್ಲಿ ದೇಶದ ಎಲ್ಲ ಪತ್ರಿಕೆಗಳ ಹೆಡ್‌ಲೈನ್‌ನಲ್ಲಿ ಬೇಡದ ಕಾರಣಕ್ಕೆ ಸುದ್ದಿಯಾಗಿತ್ತು. ಕೊಳವೆಬಾವಿ ಕೊರೆದು, ಅದು ಯಶಸ್ವಿಯಾಗದ್ದರಿಂದ ಅದರ ಮೇಲ್ಭಾಗವನ್ನು ಮುಚ್ಚದೆ ಹಾಗೇ ಬಿಡಲಾಗಿತ್ತು. ಗೆಳೆಯರೊಂದಿಗೆ ಆಟವಾಡಿಕೊಂಡು ಬಂದ ಪ್ರಿನ್ಸ್ ಎಂಬ ಬಾಲಕ ಸೀದಾ ಕೊಳವೆ ಬಾವಿಗೆ ಬಿದ್ದು, 60 ಅಡಿ ಕೆಳಗೆ ಸಿಕ್ಕಿ ಹಾಕಿಕೊಂಡಿದ್ದ. ಪುಣ್ಯವಶಾತ್ ಅವನ ಗೆಳೆಯರು ಕೂಡಲೇ ಓಡಿ ಮನೆಯವರಿಗೆ ಸುದ್ದಿ ಮುಟ್ಟಿಸಿದರು.

ಪ್ರಿನ್ಸ್‌ನನ್ನು ಕೊಳವೆ ಬಾವಿಯಿಂದ ಹೊರತರುವ ಪ್ರಯತ್ನಗಳು ಶುರುವಾದವು. ಪ್ರಿನ್ಸ್ ಬಿದ್ದಿದ್ದ ಬಾವಿಯ ಪಕ್ಕದಲ್ಲೇ ಇನ್ನೊಂದು ವಿಫಲ ಕೊಳವೆ ಬಾವಿಯನ್ನು ಕೊರೆಯಲಾಗಿತ್ತು. ಎರಡರ ನಡುವಿನ ಅಂತರ ಕೇವಲ 15 ಅಡಿಯಷ್ಟಿತ್ತು. ಕೊರೆಯಲಾಗಿದ್ದ ಇನ್ನೊಂದು ಕೊಳವೆ ಬಾವಿ ವಿಫಲವಾಗಿತ್ತು. ಎರಡೂ ಕೊಳವೆ ಬಾವಿಗಳನ್ನು 3 ಅಡಿ ವ್ಯಾಸದ ಕಬ್ಬಿಣದ ಕೊಳವೆಗಳನ್ನು ಬಳಸಿ ಜೋಡಿಸಲಾಯಿತು. ಸತತ 50 ಗಂಟೆಗಳ ಕ್ಲಿಷ್ಟ ಕಾರ್ಯಾಚರಣೆಯ ನಂತರ ಪ್ರಿನ್ಸ್‌ನನ್ನು ಕೊಳವೆ ಬಾವಿಯ ಕತ್ತಲೆಯಿಂದ ರಕ್ಷಿಸಲಾಯಿತು.

ಬಾವಿಗೆ ಬಿದ್ದಾಗ ಪ್ರಿನ್ಸ್‌ಗೆ ಕೇವಲ ನಾಲ್ಕು ವರ್ಷ. ಈಗ ಹದಿನೇಳರ ಪ್ರಾಯದವನಾಗಿದ್ದು, ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಸ್ನೇಹಿತ ಅಂಗ್ರೇಜ್‌ನೊಂದಿಗೆ ಇಲಿಯನ್ನು ಓಡಿಸಿಕೊಂಡು ಹೋಗಿದ್ದ ಪ್ರಿನ್ಸ್ ಕೊಳವೆ ಬಾವಿಗೆ ಬಿದ್ದಿದ್ದ. ಇಲಿ ಕೊಳವೆ ಬಾವಿಯ ಬಾಯಿಯನ್ನು ಮುಚ್ಚಿದ್ದ ಗೋಣಿಚೀಲದ ಕೆಳಗೆ ಸೇರಿಕೊಂಡಿತ್ತು. ಅದನ್ನು ತುಳಿದು ಸಾಯಿಸಲು ಚೀಲದತ್ತ ಜಿಗಿದ ಪ್ರಿನ್ಸ್ ಸೀದಾ ಕೊಳವೆ ಬಾವಿಗೆ ಇಲಿ ಮತ್ತು ಚೀಲದ ಸಮೇತ ಬಿದ್ದಿದ್ದ. ಮನೆಯವರಿಗೆ ವಿಷಯ ತಿಳಿದ ತಕ್ಷಣ ಗಾಬರಿಯಲ್ಲಿ ಅಳುತ್ತಾ ಬಂದವರೇ ಪ್ರಿನ್ಸ್‌ಗೆ ಕುಡಿಯಲು ನೀರು, ಬಿಸ್ಕತ್ತುಗಳನ್ನು ಹಗ್ಗಕಟ್ಟಿ ಇಳಿಸಿ, ಚಿಕ್ಕ ಬಲ್ಬಿನ ಬೆಳಕಿನ ವ್ಯವಸ್ಥೆಯನ್ನು ಮಾಡಿದರು.

'ನನ್ನ ಪುಣ್ಯವೇ ಇರಬೇಕು, ಪಕ್ಕದಲ್ಲಿ